Government of Karnataka
ಕರ್ನಾಟಕ ಸರ್ಕಾರ
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
Raichur Institute of Medical Sciences, Raichur
(ಸರ್ಕಾರದ ಸ್ವಾಯತ್ತ ಸಂಸ್ಥೆ) (Govt. Autonomous Institution)
ಹೈದ್ರಾಬಾದ್ ರೋಡ್, ರಾಯಚೂರು -584102 Hyderabad Road, Raichur -584102
Web. www. rims-raichur.com Phone /Fax-08532-238488/89 Email :info@rims-raichur.com

## 27ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು

ಸನ್ಮಾನ್ಯ ಡಾ॥ ಶರಣ ಪ್ರಕಾಶ ಆರ್. ಪಾಟೀಲ್, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 26.10.2017ರಂದು ಕೊಠಡಿ ಸಂಖ್ಯೆ. 301, ಮೂರನೇ ಮಹಡಿ, ವಿಧಾನ ಸೌಧ, ಬೆಂಗಳೂರಿನಲ್ಲಿ ಜರುಗಿದ ರಿಮ್ಸ್, ರಾಯಚೂರಿನ 27ನೇ ಆಡಳಿತ ಮಂಡಳಿ ಸಭೆಯ ಸಭಾ ನಡುವಳಿಗಳು.

ಸಭೆಯಲ್ಲಿ ಹಾಜರಿದ್ದ ಸದಸ್ಯರು

1. ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ – ಅಧ್ಯಕ್ಷರು
   ವೈದ್ಯಕೀಯ ಶಿಕ್ಷಣ ಸಚಿವರು,
   ಕರ್ನಾಟಕ ಸರ್ಕಾರ, ಬೆಂಗಳೂರು. ಹಾಗೂ
   ಅಧ್ಯಕ್ಷರು, ರಾ.ವೈ.ವಿ.ಸಂಸ್ಥೆ, ಆಡಳಿತ ಮಂಡಳಿಯ ಗೌರವಾನ್ವಿತ ಅಧ್ಯಕ್ಷರು
2. ಶ್ರೀ ವಿ.ಮಂಜುಲ, ಭಾ.ಆ.ಸೇ – ಉಪಾಧ್ಯಕ್ಷರು
   ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈ.ಶಿ),
   ಬೆಂಗಳೂರು. ಹಾಗೂ
   ಉಪಾಧ್ಯಕ್ಷರು, ರಾ.ವೈ.ವಿ.ಸಂಸ್ಥೆ, ಆಡಳಿತ ಮಂಡಳಿಯ ಗೌರವಾನ್ವಿತ ಅಧ್ಯಕ್ಷರು
3. ಶ್ರೀ ಚಂದ್ರಶೇಖರ್, – ವಿಶೇಷ ಆಹ್ವಾನಿತರು
   ಸರ್ಕಾರದ ಉಪ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ), ಬೆಂಗಳೂರು.
4. ಡಾ. ಎಸ್.ಸಚ್ಚಿದಾನಂದ , – ಸದಸ್ಯರು
   ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
   ಬೆಂಗಳೂರು
5. ಡಾ. ರಮೇಶ್. ಬಿ.ಹೆಚ್, – ವಿಶೇಷ ಆಹ್ವಾನಿತರು
   ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು.
6. ಡಾ. ಸುರೇಶ್ ಸಗರದ್, – ವಿಶೇಷ ಆಹ್ವಾನಿತರು
   ಪ್ರಭಾರಿ ವಿಶೇಷಾಧಿಕಾರಿಗಳು,
   ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು
7. ಡಾ. ಕವಿತಾ ಪಾಟೀಲ್ – ಸದಸ್ಯ ಕಾರ್ಯದರ್ಶಿ
   ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
   ರಾಯಚೂರು.

ಡಾ. ಕವಿತಾ ಪಾಟೀಲ್, ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು ಉಪಸ್ಥಿತರಿದ್ದ ಗೌರವಾನ್ವಿತ ಅಧ್ಯಕ್ಷರನ್ನು ಹಾಗೂ ಸದಸ್ಯರುಗಳನ್ನು ಸ್ವಾಗತಿಸುತ್ತಾ ಸನ್ಮಾನ್ಯ ಸಚಿವರು, ವೈದ್ಯಕೀಯ ಶಿಕ್ಷಣ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಸಭೆ ಇವರ ಅನುಮತಿಯನ್ನು ಪಡೆದು ಸಭೆಯನ್ನು ಪ್ರಾರಂಭಿಸಲಾಯಿತು.

Director
RIMS, Raichur

ಆಡಳಿತ ಮಂಡಳಿ ಸಭೆಯ ಅಧ್ಯಕ್ಷರ ಸಮಕ್ಷಮದಲ್ಲಿ ತೆಗೆದುಕೊಂಡ ನಿರ್ಣಯಗಳು ಈ ಕೆಳಗಿನಂತಿವೆ.

| | |
|---|---|
| ವಿಷಯ ಸೂಚಿ ಸಂಖ್ಯೆ – 1 | ದಿನಾಂಕ: 24.08.2016 ಮತ್ತು ದಿನಾಂಕ 10.08.2017 ರಂದು ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 25 ಮತ್ತು 26ನೇ ಆಡಳಿತ ಮಂಡಳಿಯ ಅನುಪಾಲನ ವರದಿಯನ್ನು ಸಲ್ಲಿಸುವ ಬಗ್ಗೆ. |

ಸಭೆಯ ತೀರ್ಮಾನ :–

ದಿನಾಂಕ: 24.08.2016 ಮತ್ತು ದಿನಾಂಕ 10.08.2017 ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 25 ಮತ್ತು 26ನೇ ಆಡಳಿತ ಮಂಡಳಿಯ ಅನುಪಾಲನ ವರದಿಯನ್ನು ಈ ಕೆಳಕಂಡ ಅಂಶಗಳೊಂದಿಗೆ ಪರಿಶೀಲಿಸಿ ಅನುಮೋದಿಸಲಾಯಿತು.

1) ಡಾ. ವಿ.ಬಿ. ಮಾಲಿಪಾಟೀಲ್, ಸಹಾಯಕ ಪ್ರಾಧ್ಯಾಪಕರು, ಶಸ್ತ್ರ ಚಿಕಿತ್ಸಾ ವಿಭಾಗ ಹಾಗೂ ಡಾ. ಪುಷ್ಪಾಂಜಲಿ ಮಾಲಿ ಪಾಟೀಲ್, ಸಹಾಯಕ ಪ್ರಾಧ್ಯಾಪಕರು, ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ ಇವರ ಪದೋನ್ನತಿಗೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಸರ್ಕಾರದ ಹಂತದಲ್ಲಿ ಕ್ರಮ ಕೈಗೊಳ್ಳಲು ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು.

2) ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ವರ್ಗಾವಣೆಗೆ ಸಂಬಂಧಿಸಿದಂತೆ, ವರ್ಗಾವಣೆ ಬಯಸುವ ಸಿಬ್ಬಂದಿಗಳ ಖಾಯಂ ಪೂರ್ವ ಸೇವಾವಧಿಯು ಘೋಷಣೆಯಾಗದ ಸಿಬ್ಬಂದಿಗಳ ವರ್ಗಾವಣೆಯನ್ನು ಮಾಡದೇ ಇರಲು ಸಭೆಯಲ್ಲಿ ನಿರ್ದೇಶನ ನೀಡಲಾಯಿತು.

3) ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಬಿ.ಎಸ್ಸಿ ನರ್ಸಿಂಗ್ ಕಾಲೇಜ್ ಇನ್ನು ಪ್ರಾರಂಭಿಸದೇ ಇರುವುದರಿಂದ ಉನ್ನತ ವ್ಯಾಸಂಗ ಬಯಸುವ ಬೋಧಕೇತರ ಸಿಬ್ಬಂದಿಗಳಿಗೆ ನಿರಾಕ್ಷೇಪಣಾ ಪ್ರಮಾಣ ಪತ್ರ (ಎನ್.ಓ.ಸಿ) ನೀಡದಂತೆ ನಿರ್ದೇಶನ ನೀಡಲಾಯಿತು.

4) ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕ್ಯಾಥ್‌ಲ್ಯಾಬ್ ಟೆಕ್ನಿಷನ್ ಅತಿ ಅವಶ್ಯಕತೆಯಿರುವುದರಿಂದ ಈಗಾಗಲೇ ಮಂಜೂರಾಗಿರುವ ಎಕೋ ಟೆಕ್ನಿಷಿಯನ್ನು ಹುದ್ದೆಯನ್ನು ಕ್ಯಾಥ್‌ಲ್ಯಾಬ್ ಟೆಕ್ನಿಷಿಯನ್ ಎಂದು ಮರುಪದನಾಮಿಕರಿಸಿಕೊಂಡು ಕ್ಯಾಥ್‌ಲ್ಯಾಬ್ ಟೆಕ್ನಿಷಿಯನ್ ಹುದ್ದೆಯನ್ನು ನೇಮಕಾತಿ ಮಾಡಿಕೊಳ್ಳಲು ಅನುಮೋದನೆ ನೀಡಲಾಯಿತು.

5) ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿನ ವೈದ್ಯಶಾಸ್ತ್ರ ವಿಭಾಗ ಹಾಗೂ ಅದಕ್ಕೆ ಸಂಬಂಧಿಸಿದ ಇತರ ವಿಭಾಗಗಳನ್ನು (ಜನರಲ್ ಮೆಡಿಸಿನ್) ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸ್ಥಳಾಂತರಿಸಲು ಬೇಕಾದ ಎಲ್ಲಾ ಉಪಕರಣ, ಪೀಠೋಪಕರಣ, ಸಾಮಾಗ್ರಿಗಳು ಮತ್ತು ಸಿವಿಲ್ ಕಾಮಗಾರಿಗಳನ್ನು ನಿಯಮಸಾರ ಖರೀದಿಸಲು ಆಡಳಿತ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

6) ಡಾ. ವಿಜಯ ಮಹಾಂತೇಶ್ ಇವರ ಕಾರ್ಯವೈಖರಿ ಕುರಿತು ಸಂಪೂರ್ಣವಾದ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಲು ನಿರ್ದೇಶನ ನೀಡಲಾಯಿತು.

7) ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಈಗಾಗಲೇ ಗ್ಯಾಸ್ಟ್ರೋ ಎಂಟಾರಲಜಿ ವಿಭಾಗವನ್ನು ಹೊರತು ಪಡಿಸಿ, ಇತರ ವಿಭಾಗಗಳಿಗೆ ಬೇಕಾದ ಉಪಕರಣಗಳನ್ನು ಪೂರೈಕೆ ಮಾಡಲಾಗಿದ್ದು, ಗ್ಯಾಸ್ಟ್ರೋ ಎಂಟಾರಲಜಿ ವಿಭಾಗಕ್ಕೂ ಸಹ ತುರ್ತಾಗಿ ಉಪಕರಣಗಳನ್ನು ಪೂರೈಸಲು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಿ ಕ್ರಮ ಕೈಗೊಳ್ಳುವಂತೆ ಅನುಮೋದನೆ ನೀಡಲಾಯಿತು.

Director
RIMS, Raichur

8) ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಎರಡನೇ ಹಂತದಲ್ಲಿ ಸೃಜಿಸಬೇಕಾದ ಹುದ್ದೆಗಳ ಸಂಪೂರ್ಣ ಮಾಹಿತಿಯನ್ನು ಕೂಡಲೇ ಸರ್ಕಾರಕ್ಕೆ ಸಲ್ಲಿಸಿ ಹುದ್ದೆಗಳ ಸೃಜನೆಗೆ ಕ್ರಮ ಕೈಗೊಳ್ಳುವಂತೆ ಹಾಗು ತುರ್ತಾಗಿ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಬೇಕಾದ 06 ತುರ್ತು ನಿಘಾ ಘಟಕದ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಿಕೊಳ್ಳುವಂತೆ ಆಡಳಿತ ಮಂಡಳಿಯು ಅನುಮೋದನೆ ನೀಡಲಾಯಿತು.

| ವಿಷಯ ಸೂಚಿ ಸಂಖ್ಯೆ – 02 | ದಿನಾಂಕ 25.10.2016 ರಂದು ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 13ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳನ್ನು ಅನುಮೋದಿಸುವ ಬಗ್ಗೆ. |
|---|---|

ದಿನಾಂಕ 25.10.2016 ರಂದು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ. 601, ಬಹುಮಹಡಿಗಳ ಕಟ್ಟಡ ಬೆಂಗಳೂರಿನಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 13ನೇ ಹಣಕಾಸು ಸಮಿತಿ ಸಭೆಯ ಸಭಾ ನಡುವಳಿಗಳನ್ನು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇವರ ಅಧ್ಯಕ್ಷತೆಯಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 13ನೇ ಹಣಕಾಸು ಸಮಿತಿ ಸಭೆಯ ಸಭಾ ನಡುವಳಿಗಳನ್ನು ವಿಷಯವಾರು ಆಡಳಿತ ಮಂಡಳಿ ಸಭೆಯು ಪರಿಶೀಲಿಸಿ, ಅನುಮೋದನೆ ನೀಡಲಾಯಿತು.

| ವಿಷಯ ಸೂಚಿ ಸಂಖ್ಯೆ –03 | ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ಖಾಯಂ ಪೂರ್ವ ಸೇವಾವಧಿಯನ್ನು ಘೋಷಣೆ ಮಾಡುವ ಬಗ್ಗೆ. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ 11 ಬೋಧಕ ಸಿಬ್ಬಂದಿಗಳು ಎರಡು ವರ್ಷಗಳ ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುತ್ತಾರೆ. ಸದರಿ ವೈದ್ಯರುಗಳ ವಿರುದ್ಧ ಯಾವುದೇ ವ್ಯತಿರಿಕ್ತ ಷರಾಗಳು ಇರುವುದಿಲ್ಲ.

ಸರ್ಕಾರದ ಆದೇಶ ಸಂಖ್ಯೆ. ಆಕುಕ / 86 / ಎಂಎಂಇ / 2013 ದಿನಾಂಕ 10.04.2013 ರನ್ವಯ ಕರ್ನಾಟಕ ನಾಗರಿಕ ಸೇವಾ ನಿಯಮ 1977 ರ ನಿಯಮ 5 ರನ್ವಯ ಖಾಯಂ ಪೂರ್ವ ಸೇವಾ ಅವಧಿಯನ್ನು ನೇಮಕಾತಿ ಪ್ರಾಧಿಕಾರವು ಘೋಷಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಕೆಳಕಂಡ 11 ಬೋಧಕ ಸಿಬ್ಬಂದಿಗಳ ಖಾಯಂ ಪೂರ್ವ ಸೇವಾವಧಿಯನ್ನು ಈಗಾಗಲೇ ನಿಯಮಾನುಸಾರ ಘೋಷಣೆ ಮಾಡಲಾಗಿರುತ್ತದೆ.

ಕಾರಣ ಸರ್ಕಾರದ ಆದೇಶ ಸಂಖ್ಯೆ. ಆಕುಕ / 86 / ಎಂಎಂಇ / 2013 ದಿನಾಂಕ 10.04.2013 ರನ್ವಯ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 11 ಬೋಧಕ ಸಿಬ್ಬಂದಿಗಳ ಖಾಯಂಪೂರ್ವ ಸೇವಾವಧಿಯನ್ನು ಘೋಷಣೆ ಮಾಡಿರುವ ಬಗ್ಗೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಿ ಸಲ್ಲಿಸಿದೆ.

| ಕ್ರಮ ಸಂಖ್ಯೆ | ಹೆಸರು | ಪದನಾಮ | ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕ | ವಿಭಾಗ | ಖಾಯಂ ಪೂರ್ವ ಸೇವಾವಾಧಿಗೆ ಅರ್ಹರಾದ ದಿನಾಂಕ | ಷರಾ |
|---|---|---|---|---|---|---|
| 1 | ಡಾ. ಶ್ರೀಕಾಂತ್ | ಪ್ರಾಧ್ಯಾಪಕರು | 07.10.2014 | ಜೀವ ರಸಾಯನ ಶಾಸ್ತ್ರ ವಿಭಾಗ | 06.10.2016 | |
| 2 | ಡಾ. ವಿಜಯ ಕೃಷ್ಣ | ಪ್ರಾಧ್ಯಾಪಕರು | 25.09.2014 | ಶರೀರ ಕ್ರಿಯಾ ಶಾಸ್ತ್ರ ವಿಭಾಗ | 24.09.2016 | |



Director
RIMS, Raichur

| | | | | | | |
|---|---|---|---|---|---|---|
| 3 | ಡಾ. ಬಸವರಾಜ್ ಪಾಟೀಲ್ | ಪ್ರಾಧ್ಯಾಪಕರು | 01.10.2014 | ವಿಧಿ ವೈದ್ಯ ಶಾಸ್ತ್ರ ವಿಭಾಗ | 30.09.2016 | |
| 4 | ಡಾ. ವೆಂಕಟೇಶ್.ಯು | ಪ್ರಾಧ್ಯಾಪಕರು | 01.10.2014 | ಕಿವಿ, ಮೂಗು ಮತ್ತು ಗಂಟಲು ವಿಭಾಗ | 30.09.2016 | |
| 5 | ಡಾ. ಶರಣಬಸವಪ್ಪ ಕರೆಡ್ಡಿ | ಸಹ ಪ್ರಾಧ್ಯಾಪಕರು | 01.10.2014 | ವಿಧಿ ವೈದ್ಯಶಾಸ್ತ್ರ ವಿಭಾಗ | 30.09.2016 | |
| 6 | ಡಾ. ಸುನೀಲ್ ಕುಮಾರ ಕೈನೂರು | ಸಹಾಯಕ ಪ್ರಾಧ್ಯಾಪಕರು | 25.09.2014 | ವಿಧಿ ವೈದ್ಯಶಾಸ್ತ್ರ ವಿಭಾಗ | 24.09.2016 | |
| 7 | ಡಾ. ಮಹ್ಮದ್ ಫಯಾಜುದ್ದೀನ್ | ಸಹಾಯಕ ಪ್ರಾಧ್ಯಾಪಕರು | 30.09.2014 | ಔಷಧ ಶಾಸ್ತ್ರ ವಿಭಾಗ | 29.09.2016 | |
| 8 | ಡಾ. ಅರುಣ್. ಎಂ | ಸಹಾಯಕ ಪ್ರಾಧ್ಯಾಪಕರು | 29.09.2014 | ವೈದ್ಯಶಾಸ್ತ್ರ ವಿಭಾಗ | 28.09.2016 | |
| 9 | ಡಾ. ರಶ್ಮಿ ನಾಗನಗೌಡರು | ಸಹಾಯಕ ಪ್ರಾಧ್ಯಾಪಕರು | 25.09.2014 | ಸ್ತ್ರೀ ಮತ್ತು ಪ್ರಸೂತಿ ವಿಭಾಗ | 10.10.2016 | |
| 10 | ಡಾ, ರೇವತಿ | ಸಹಾಯಕ ಪ್ರಾಧ್ಯಾಪಕರು | 08.06.2015 | ಸಮುದಾಯ ಆರೋಗ್ಯ ಶಾಸ್ತ್ರ ವಿಭಾಗ | 07.06.2017 | |
| 11 | ಡಾ. ರಶ್ಮಿ ಎಂ.ಬಿ | ಸಹಾಯಕ ಪ್ರಾಧ್ಯಾಪಕರು | 07.10.2014 | ಸ್ತ್ರೀ ಮತ್ತು ಪ್ರಸೂತಿ ವಿಭಾಗ | 06.10.2016 | |

ಸಭೆಯ ತೀರ್ಮಾನ :-

ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ಖಾಯಂ ಪೂರ್ವ ಸೇವಾವಧಿಯನ್ನು ಸರ್ಕಾರದ ಆದೇಶ ಸಂಖ್ಯೆ. ಆಕುಕ / 86 / ಎಂಎಂಇ / 2013 ದಿನಾಂಕ 10.04.2013 ರನ್ವಯ ನಿಯಮಾನುಸಾರ ಘೋಷಣೆ ಮಾಡಿರುವ ಬಗ್ಗೆ ಆಡಳಿತ ಮಂಡಳಿಯು ಪರಿಶೀಲಿಸಿ, ಘಟನೋತ್ತರ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ –04 | ಭಾರತೀಯ ವೈದ್ಯಕೀಯ ಮಂಡಳಿಯು ಸೂಚಿಸಿರುವ ಮಾರ್ಗಸೂಚಿಯಂತೆ ಅವಶ್ಯವಿರುವ ಉಪಕರಣಗಳನ್ನು ನಿಯಮಾನುಸಾರ ಖರೀದಿಸಲು ಅನುಮತಿ ನೀಡುವ ಬಗ್ಗೆ. |

ಭಾರತೀಯ ವೈದ್ಯಕೀಯ ಮಂಡಳಿಯು ದಿನಾಂಕ 23.08.2017ರ ಅಧಿಸೂಚನೆಯಲ್ಲಿ ವೈದ್ಯಕೀಯ ಪ್ರವೇಶಾತಿಯನ್ನು 100 ರಿಂದ 150 ಕ್ಕೆ ಹೆಚ್ಚಿಸಿದಲ್ಲಿ ವಿವಿಧ ವಿಭಾಗಗಳಿಗೆ ಅವಶ್ಯವಿರುವ ಉಪಕರಣಗಳ ಖರೀದಿಸಿ ಅಳವಡಿಸುವ ಸಂಬಂಧ ಪಟ್ಟಿಯನ್ನು ನೀಡಿರುತ್ತದೆ. 2017–18 ನೇ ಸಾಲಿನಿಂದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವೈದ್ಯಕೀಯ ಪ್ರವೇಶಾತಿಯನ್ನು 100 ರಿಂದ 150ಕ್ಕೆ ಹೆಚ್ಚಿಸಿದ್ದು, ಈಗಾಗಲೇ ಪ್ರಸಕ್ತ ಸಾಲಿಗೆ 150 ವೈದ್ಯ ವಿದ್ಯಾರ್ಥಿಗಳ ಪ್ರವೇಶಾತಿಯಾಗಿರುತ್ತದೆ.

ಭಾರತೀಯ ವೈದ್ಯಕೀಯ ಮಂಡಳಿಯು ಸೂಚಿಸಿರುವ ಮಾರ್ಗಸೂಚಿಯಂತೆ ಈಗಾಗಲೇ ಹಲವು ಉಪಕರಣಗಳನ್ನು ನಿಯಮಾನುಸಾರ ಖರೀದಿ ಮಾಡಲಾಗಿದ್ದು, ಇನ್ನು ಹಲವು ಉಪಕರಣಗಗಳು, ಸಲಕರಣೆಗಳು ಹಾಗೂ ಪೀಠೋಪಕರಣಗಳು ಖರೀದಿ ಮಾಡಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯು ರಿಮ್ಸ್ ಸಂಸ್ಥೆಗೆ ಪರಿವೀಕ್ಷಣೆಯ ಸಂಬಂಧ ಭೇಟಿ ನೀಡಿದ ಸಮಯದಲ್ಲಿ ಆಕ್ಷೇಪಣೆಯನ್ನು ಸಲ್ಲಿಸುವ ಸಾಧ್ಯತೆಯಿರುತ್ತದೆ. ಈ ಹಿನ್ನಲೆಯಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯ ಮಾರ್ಗಸೂಚಿಯಂತೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಿದಲ್ಲಿ ಆಕ್ಷೇಪಣೆಯನ್ನು ಸರಿಪಡಿಸಬಹುದಾಗಿರುತ್ತದೆ.

ಸದರಿ ಅವಶ್ಯ ಉಪಕರಣಗಳನ್ನು ಖರೀದಿಸಲು ಸರ್ಕಾರದ ಆದೇಶ ಸಂಖ್ಯೆ ಆಕುಕ / 190 ಎಂಪಿಎಸ್ / 2016 ದಿನಾಂಕ 03.04.2017 ರನ್ವಯ ವೈದ್ಯಕೀಯ ಪ್ರವೇಶಾತಿಯನ್ನು 100 ರಿಂದ 150 ಕ್ಕೆ ಹೆಚ್ಚಿಸುವ ಸಂಬಂಧ ಎಲ್ಲಾ ಅವಶ್ಯ ಉಪಕರಣ, ಪೀಠೋಪಕರಣ ಮತ್ತು ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳುವಂತೆ ಹಾಗೂ ಸದರಿ ವೆಚ್ಚಗಳನ್ನು ಲೆಕ್ಕ ಶಿರ್ಷಿಕೆ 2210–05–105–1–54 ಅಡಿಯಲ್ಲಿ ಒದಗಿಸಲಾಗುವ ಅನುದಾನದಿಂದ ಭರಿಸುವಂತೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ.

Director
RIMS, Raichur

ಕಾರಣ ಭಾರತೀಯ ವೈದ್ಯಕೀಯ ಮಂಡಳಿಯು ದಿನಾಂಕ 23.08.2017 ರ ಅಧಿಸೂಚನೆಯಲ್ಲಿ ಸೂಚಿಸಿರುವ ಎಲ್ಲಾ ಅವಶ್ಯವಿರುವ ಉಪಕರಣಗಗಳು, ಸಲಕರಣೆಗಳು ಹಾಗೂ ಪೀಠೋಪಕರಣಗಳು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಅವಶ್ಯಕತೆಗನುಗುಣವಾಗಿ ಕಾಲಕಾಲಕ್ಕೆ ಖರೀದಿಸಲು ಹಾಗೂ ಸರ್ಕಾರದ ಆದೇಶ ಸಂಖ್ಯೆ ಆಕುಕ / 190 ಎಂಪಿಎಸ್ / 2016 ದಿನಾಂಕ 03.04.2017 ರನ್ವಯ ಸದರಿ ವೆಚ್ಚವನ್ನು ಲೆಕ್ಕ ಶಿರ್ಷಿಕೆ 2210–05–105–1–54 ಅಡಿಯಲ್ಲಿ ಭರಿಸಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ಭಾರತೀಯ ವೈದ್ಯಕೀಯ ಮಂಡಳಿಯು ದಿನಾಂಕ 23.08.2017ರ ಅಧಿಸೂಚನೆಯಲ್ಲಿ ಸೂಚಿಸಿರುವ ಉಪಕರಣಗಳ ಪಟ್ಟಿಯಲ್ಲಿ ಈಗಾಗಲೇ ಸಂಸ್ಥೆಯಲ್ಲಿ ಲಭ್ಯವಿರುವ ಉಪಕರಣಗಳನ್ನು ಹೊರತುಪಡಿಸಿ, ಇನ್ನುಳಿದ ಅತಿ ಅವಶ್ಯಕ ಉಪಕರಣಗಳನ್ನು ಪಟ್ಟಿ ಮಾಡಿ ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಖರೀದಿಸಲು ಹಾಗೂ ಸದರಿ ವೆಚ್ಚವನ್ನು ಲೆಕ್ಕ ಶಿರ್ಷಿಕೆ 2210–05–105–1–54 ಅಡಿಯಲ್ಲಿ ಭರಿಸಲು ಆಡಳಿತ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ –05 | ಜಿಲ್ಲಾ ಶಸ್ತ್ರ ಚಿಕಿತ್ಸಕರು ಇವರಿಗೆ ಸರ್ಕಾರದ ನಿರ್ದೇಶನದನ್ವಯ ಅಧಿಕಾರ ಹಂಚಿಕೆ ಮಾಡುವ ಬಗ್ಗೆ |

ಸರ್ಕಾರದ ಆದೇಶ ಸಂಖ್ಯೆ. ಆಕುಕ / 313 / ಹೆಚ್ಎಸ್ಹೆಚ್ / 2017 ದಿನಾಂಕ 21.07.2017 ಹಾಗೂ ಸರ್ಕಾರದ ಆದೇಶ ಸಂಖ್ಯೆ. ಆಕುಕ / 185 / ಎಂಪಿಎಸ್ / 2017 ದಿನಾಂಕ 26.07.2017 ರನ್ವಯ ಡಾ. ವಿಜಯ ಶಂಕರ್, ತಜ್ಞರು, ಸಮುದಾಯ ಆರೋಗ್ಯ ಕೇಂದ್ರ, ಜೆ. ಮಲ್ಲಾಪುರ ಇವರನ್ನು ರಾಯಚೂರಿನ ಜಿಲ್ಲಾ ಆಸ್ಪತ್ರೆಯಲ್ಲಿ ಖಾಲಿಯಿರುವ ಜಿಲ್ಲಾ ಶಸ್ತ್ರ ಚಿಕಿತ್ಸಕರ ಹುದ್ದೆಗೆ ವರ್ಗಾಯಿಸಿ ನೇಮಿಸಲಾಗಿರುತ್ತದೆ. ಸದರಿಯವರು ದಿನಾಂಕ 24.07.2017 ರಂದು ಪೂರ್ವಾಹ್ನ ಜಿಲ್ಲಾ ಶಸ್ತ್ರ ಚಿಕಿತ್ಸಕರ ಹುದ್ದೆಯ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ. ಆಕುಕ / 293 / ಸಿಜಿಎಂ / 2016 (ಭಾ–1), ದಿನಾಂಕ 06.06.2017 ರನ್ವಯ ಜಿಲ್ಲಾ ಆಸ್ಪತ್ರೆಗಳಿಗೆ ಸುಲಲಿತವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅನುವಾಗುವಂತೆ ಆಡಳಿತಾತ್ಮಕ ನಿಯಂತ್ರಣವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಿಂದ ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ವೈದ್ಯಕೀಯ ಕಾಲೇಜುಗಳ ನಿರ್ದೇಶಕರಿಗೆ ವರ್ಗಾಯಿಸಿ ಸರ್ಕಾರದ ನಿರ್ದೇಶನದಂತೆ, ವಿಧಾನಗಳನ್ನು ಅನುಸರಿಸುವಂತೆ ಸೂಚಿಸಲಾಗಿರುತ್ತದೆ. ಆದರೆ ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಜಿಲ್ಲಾ ಶಸ್ತ್ರ ಚಿಕಿತ್ಸಕರಿಗೆ ಅಧಿಕಾರ ಹಂಚಿಕೆ ಕುರಿತು ಆಡಳಿತ ಮಂಡಳಿಯ ಮಾರ್ಗದರ್ಶನ ಕೋರಿದೆ.

ಜಿಲ್ಲಾ ಶಸ್ತ್ರ ಚಿಕಿತ್ಸಕರು, ರಾಯಚೂರು ಇವರಿಗೆ ಸರ್ಕಾರದ ಆದೇಶ ಸಂಖ್ಯೆ. ಆಕುಕ / 293 / ಸಿಜಿಎಂ / 2016 (ಭಾ–1), ದಿನಾಂಕ 06.06.2017 ರನ್ವಯ ಅಧಿಕಾರ ಹಂಚಿಕೆ ಮಾಡುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ಸದರಿ ವಿಷಯದ ಕುರಿತು ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ನಿರ್ದೇಶನ ನೀಡುವವರೆಗೆ ಸರ್ಕಾರದ ಆದೇಶ ಸಂಖ್ಯೆ. ಆಕುಕ / 293 / ಸಿಜಿಎಂ / 2016 (ಭಾ–1), ದಿನಾಂಕ 06.06.2017 ರ ಮೇಲೆ ಯಾವುದೇ ಕ್ರಮವನ್ನು ಅನುಸರಿಸದಂತೆ ಸೂಚಿಸಿ, ಯಥಾಸ್ಥಿತಿಯನ್ನು ಮುಂದುವರೆಸಿಕೊಂಡು ಹೋಗುವಂತೆ ನಿರ್ದೇಶನ ನೀಡಲಾಯಿತು.

Director
RIMS Raichur

| ವಿಷಯ ಸೂಚಿ ಸಂಖ್ಯೆ –06 | ಮೆ॥ ಐ.ರೀಲಿಫ್ ಸಂಸ್ಥೆಯವರು ಜಾರಿಗೆ ತರಲು ಉದ್ದೇಶಿಸಿರುವ ಮೊಬೈಲ್ ಆಪ್‌ನ್ನು ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಅನುಷ್ಠಾನಗೊಳಿಸಲು ಅನುಮತಿ ನೀಡುವ ಬಗ್ಗೆ. |
|---|---|

ಸರ್ಕಾರದ ಆದೇಶ ಸಂಖ್ಯೆ. ಆಕುಕ / 178 / ಐಎಂಎಂ / 2016 ದಿನಾಂಕ 25.08.2016 ರನ್ವಯ ಮೆ॥ ಐ.ರೀಲಿಫ್ ಸಂಸ್ಥೆ, ಬೆಂಗಳೂರು ಎಂಬ ಖಾಸಗಿ ಕಂಪನಿಯು ಸಾರ್ವಜನಿಕರಿಗೆ ಸುಲಭವಾಗಿ ರಕ್ತ ಲಭ್ಯತೆ ಬಗ್ಗೆ ಮಾಹಿತಿಯನ್ನು ನೀಡಿ, ಅವಶ್ಯಕತೆಗನುಗುಣವಾಗಿ ರಕ್ತ ನಿಧಿಗಳಲ್ಲಿ ಬೇಡಿಕೆ ನೀಡುವ ಸಂಬಂಧ ಮೊಬೈಲ್ ಆಪ್‌ನ್ನು ಜಾರಿಗೆ ತರಲು ಉದ್ದೇಶಿಸಿರುತ್ತದೆ. ರಕ್ತ ಮಾಧರಿಯನ್ನು ಪ್ರಿಸ್‌ಕ್ರಿಪ್ಷನ್ ನೊಂದಿಗೆ ಸಂಬಧಪಟ್ಟವರು ತೆಗೆದುಕೊಂಡು ಹೋಗಬೇಕು ಇದಕ್ಕಾಗಿ ಇಲಾಖೆಯವರು ನೀಡಬೇಕಾದ ಸಹಕಾರ ಕೇವಲ ಬ್ಲಡ್ ಬ್ಯಾಂಕ್ ಗಳೊಂದಿಗೆ ಸಂಪರ್ಕ ಕೊಡಿಸುವುದು ಸದರಿ ಸೇವೆಗಾಗಿ ರೂ. 30/– ಗಳನ್ನು ನಾಗರೀಕರು ಆಪ್ ತಯಾರಿಸಿದ ರಿಲೀಫ್ ಸಂಸ್ಥೆಗೆ ಆನ್‌ಲೈನ್ ಮೂಲಕ ನೀಡಬೇಕಾಗುತ್ತದೆ. ಅದುದರಿಂದ ನಾಗರೀಕರ ಸೌಲಭ್ಯವನ್ನು ಅತಿ ಕಡಿಮೆ ದರದಲ್ಲಿ ಖಾಸಗಿ ಸಹಭಾಗಿತ್ವದಿಂದ ಸಹಕಾರ ನೀಡುವ ಬಗ್ಗೆ ಕೋರಿರುತ್ತಾರೆ.

ಮೆ॥ ಐ.ರೀಲಿಫ್ ಸಂಸ್ಥೆಯವರು ಜಾರಿಗೆ ತರಲು ಉದ್ದೇಶಿಸಿರುವ ಮೊಬೈಲ್ ಆಪ್‌ನ್ನು ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಅನುಷ್ಠಾನಗೊಳಿಸಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಸರ್ಕಾರದ ನಿರ್ದೇಶನದಂತೆ ಇ – ಹಾಸ್ಪಿಟಲ್‌ನ್ನು ಜಾರಿಗೊಳಿಸುತ್ತಿರುವುದರಿಂದ ಮೆ॥ ಐ.ರೀಲಿಫ್ ಸಂಸ್ಥೆಯವರ ರಕ್ತ ಲಭ್ಯತೆ ಬಗ್ಗೆ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಮೊಬೈಲ್ ಆಪ್‌ನ್ನು ಜಾರಿಗೆ ತರದೇ ಇರಲು ಆಡಳಿತ ಮಂಡಳಿಯು ಸೂಚಿಸಿತು.

| ವಿಷಯ ಸೂಚಿ ಸಂಖ್ಯೆ –07 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಟ್ರಾನ್ಸ್‌ಫಾರ್ಮರ್‌ಗಳನ್ನು ಮೆ॥ ಅಲ್ಲಾಭಕ್ಷ ಇವರ ಮುಖಾಂತರ ದುರಸ್ಥಿ ಮಾಡಿಸಲು ಅನುಮತಿ ನೀಡುವ ಕುರಿತು. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಈ ಕೆಳಕಂಡಂತೆ ಟ್ರಾನ್ಸ್ ಫಾರ್ಮರ್‌ಗಳನ್ನು ಅಳವಡಿಸಲಾಗಿರುತ್ತದೆ.

| ಕ್ರ.ಸಂ | ಸ್ಥಳ | ವಿವರ | ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ | ಷರಾ |
|---|---|---|---|---|
| 01 | ರಿಮ್ಸ್ ವೈದ್ಯಕೀಯ ಕಾಲೇಜು | 500–ಕೆವಿ ಟ್ರಾನ್ಸ್‌ಫಾರ್ಮರ್ | 02 | ಒಂದು 500 ಕೆವಿ ಟ್ರಾನ್ಸ್‌ಫಾರ್ಮರ್ ದುರಸ್ಥಿಯಲ್ಲಿರುತ್ತದೆ. |
| 02 | ರಿಮ್ಸ್ ಬೋಧಕ ಆಸ್ಪತ್ರೆ | 500–ಕೆವಿ ಟ್ರಾನ್ಸ್‌ಫಾರ್ಮರ್ | 02 | – |

Director
RIMS, Raichur

| | | | | |
|---|---|---|---|---|
| 03 | ಬೋಧಕ ಸಿಬ್ಬಂದಿ ವಸತಿ ಸಮುಚ್ಚಯ | 250–ಕೆವಿ ಟ್ರಾನ್ಸ್‌ಫಾರ್ಮರ್ | 01 | – |
| 04 | ಬೋಧಕೇತರ ಸಿಬ್ಬಂದಿ ವಸತಿ ಸಮುಚ್ಚಯ | 250–ಕೆವಿ ಟ್ರಾನ್ಸ್‌ಫಾರ್ಮರ್ | 01 | – |
| 05 | ಓಪೆಕ್ ಆಸ್ಪತ್ರೆ | 500–ಕೆವಿ ಟ್ರಾನ್ಸ್‌ಫಾರ್ಮರ್ | 02 | 02 500 ಕೆವಿ ಟ್ರಾನ್ಸ್‌ಫಾರ್ಮರ್‌ಗಳು ದುರಸ್ಥಿಯಲ್ಲಿರುತ್ತವೆ. |
| 06 | ಓಪೆಕ್ ಆಸ್ಪತ್ರೆಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವಸತಿ ಸಮುಚ್ಚಯ | 250–ಕೆವಿ ಟ್ರಾನ್ಸ್‌ಫಾರ್ಮರ್ | 02 | – |

ಟ್ರಾನ್ಸ್‌ಫಾರ್ಮರ್‌ಗಳು ದುರಸ್ಥಿ ಬಂದ ಸಮಯದಲ್ಲಿ ವಿದ್ಯುತ್ ಇಲಾಖೆಯವರಿಗೆ ಈಗಾಗಲೇ ಗಮನಕ್ಕೆ ತರಲಾಗಿದ್ದು, ಸದರಿಯವರು 250 ಕೆವಿ ಒಳಗಡೆಯಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ವಿದ್ಯುತ್ ಇಲಾಖೆಯಿಂದ ದುರಸ್ಥಿಗೊಳಿಸಲಾಗುವುದು, 250 ಕೆವಿ ಮೇಲ್ಪಟ್ಟ ಟ್ರಾನ್ಸ್‌ಫಾರ್ಮರ್‌ಗಳನ್ನು ತಮ್ಮ ಹಂತದಲ್ಲಿಯೇ ದುರಸ್ಥಿ ಮಾಡಿಸಿಕೊಳ್ಳಬೇಕೆಂದು ತಿಳಿಸಿರುತ್ತಾರೆ. ಆದರೆ ರಾಯಚೂರು ನಗರದಲ್ಲಿ ಮೆ॥ ನೂರಿ ಎಂಟರ್‌ಪ್ರೈಸಸ್, ರಾಯಚೂರು ಇವರು ಮಾತ್ರ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ಥಿ ಮಾಡುತ್ತಾರೆ. ಇವರನ್ನು ಹೊರತುಪಡಿಸಿ, ಬೇರೆ ಯಾರು ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ಥಿ ಮಾಡುವುದಿಲ್ಲ.

ಏಕಾಏಕಿ ಟ್ರಾನ್ಸ್‌ಫಾರ್ಮರ್‌ಗಳು ದುರಸ್ಥಿಗೆ ಬಂದ ಸಮಯದಲ್ಲಿ ಸಂಸ್ಥೆ / ಆಸ್ಪತ್ರೆಯಲ್ಲಿರುವ ಕೆಲಸ ಕಾರ್ಯಗಳಿಗೆ ಹಾಗೂ ಆಸ್ಪತ್ರೆಯಲ್ಲಿನ ರೋಗಿಗಳಿಗೆ ತುಂಬಾ ತೊಂದರೆ ಉಂಟಾಗುತ್ತದೆ.

ಕಾರಣ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ದುರಸ್ಥಿಯಲ್ಲಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ಮೆ॥ ನೂರಿ ಎಂಟರ್‌ಪ್ರೈಸಸ್, ರಾಯಚೂರು ಇವರ ಮುಖಾಂತರ ದುರಸ್ಥಿ ಮಾಡಿಸಲು ಮತ್ತು ಮುಂದಿನ ದಿನಗಳಲ್ಲಿ ಯಾವುದೇ ರೀತಿ ಟ್ರಾನ್ಸ್ ಫಾರ್ಮರ್‌ಗಳು ದುರಸ್ಥಿ ಬಂದರೂ ಸಹ ಅವುಗಳನ್ನು ಮೆ॥ ನೂರಿ ಎಂಟರ್‌ಪ್ರೈಸಸ್, ರಾಯಚೂರು (ಅಲ್ಲಾಭಕ್ಷ್) ಇವರ ಮುಖಾಂತರ ದುರಸ್ಥಿ ಮಾಡಿಸುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಪ್ರಸ್ತುತ ದುರಸ್ಥಿಯಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ಮೆ॥ ನೂರಿ ಎಂಟರ್‌ಪ್ರೈಸಸ್, ರಾಯಚೂರು (ಅಲ್ಲಾಭಕ್ಷ್) ಇವರ ಮುಖಾಂತರ ದುರಸ್ಥಿಗೊಳಿಸಿಕೊಳ್ಳಲು ಹಾಗೂ ಮುಂದಿನ ದಿನಗಳಲ್ಲಿ ಸಂಸ್ಥೆಯಲ್ಲಿನ ಟ್ರಾನ್ಸ್ ಫಾರ್ಮರ್‌ಗಳು ದುರಸ್ಥಿ ಬಂದರೂ ಸಹ ಅವುಗಳನ್ನು ಮೆ॥ ನೂರಿ ಎಂಟರ್‌ಪ್ರೈಸಸ್, ರಾಯಚೂರು (ಅಲ್ಲಾಭಕ್ಷ್) ಇವರ ಮುಖಾಂತರ ಜೆಸ್ಕಾಂ ದರಗಳ ಜೊತೆಗೆ ಹೋಲಿಸಿ, ಜೆಸ್ಕಾಂ ದರಗಳನ್ನು ಮೀರದಂತೆ ತುಲನಾತ್ಮಕ **(Compitative)** ದರಗಳನ್ನು ಪಡೆದು ದುರಸ್ಥಿ ಕೈಗೊಳ್ಳುವಂತೆ ಮತ್ತು ಸದರಿ ಟ್ರಾನ್ಸ್‌ಫಾರ್ಮರ್‌ಗಳ ದುರಸ್ಥಿಗೆ ಅವಶ್ಯವಿರುವ ವೆಚ್ಚವನ್ನು ಸಂಸ್ಥೆಯಲ್ಲಿ ಲೆಕ್ಕ ಶಿರ್ಷಿಕೆ 2210 ಅಡಿಯಲ್ಲಿ ಲಭ್ಯವಿರುವ ಅನುದಾನದಿಂದ ಭರಿಸಿಕೊಳ್ಳುವಂತೆ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ –08 | ರಿಮ್ಸ್ ಸಂಸ್ಥೆಯಲ್ಲಿ ಖಾಲಿಯಿರುವ ಅಡಿಯೋಲಾಜಿಸ್ಟ್ ಹುದ್ದೆಗಳನ್ನು ಸಂಚಿತ ವೇತನದ ಮೇಲೆ ಭರ್ತಿ ಮಾಡಲು ಅನುಮತಿ ನೀಡುವ ಕುರಿತು. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಮಂಜೂರಾಗಿರುವ ಅಡಿಯೋಮೆಟ್ರಿ ತಂತ್ರಜ್ಞರು ಹಾಗೂ ಸ್ಪೀಚ್ ಥೆರಫಿಸ್ಟ್ ಹುದ್ದೆಗಳನ್ನು ಈ ಹಿಂದೆ ನಿಯಮಾನುಸಾರ ಪತ್ರಿಕಾ ಪ್ರಕಟಣೆ ಹೊರಡಿಸಿ, ನೇಮಕಾತಿ ಮಾಡಿಕೊಳ್ಳಲಾಗಿತ್ತು. ಆದರೆ ನೇಮಕಾತಿಯಾದ ಶ್ರೀಮತಿ ಅನುಷಾ. ಕೆ, ಅಡಿಯೋಮೆಟ್ರಿ ತಂತ್ರಜ್ಞರು ಹಾಗೂ ಶ್ರೀ ಕೆ. ಸಾಯಿ ಕಿರಣ್, ಸ್ಪೀಚ್ ಥೆರಫಿಸ್ಟ್ ಇವರುಗಳು ತಮ್ಮ ವೈಯಕ್ತಿಕ ಕಾರಣಗಳಿಂದ ರಾಜೀನಾಮೆಯನ್ನು ನೀಡಿರುತ್ತಾರೆ. ಇದರಿಂದಾಗಿ ಅಡಿಯೋಮೆಟ್ರಿ ತಂತ್ರಜ್ಞರು ಹಾಗೂ ಸ್ಪೀಚ್ ಥೆರಫಿಸ್ಟ್

Director
RIMS, Raichur

ಹುದ್ದೆಗಳು ಖಾಲಿಯಿರುತ್ತವೆ. ಸದರಿ ಹುದ್ದೆಗಳು ಭಾರತೀಯ ವೈದ್ಯಕೀಯ ಮಂಡಳಿಯು ಪರಿವೀಕ್ಷಣೆಯ ವೇಳೆಯಲ್ಲಿ ಅತಿ ಅವಶ್ಯಕವಾಗಿರುತ್ತವೆ.

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿಯಿರುವ ಹುದ್ದೆಗಳು |
|---|---|---|---|---|
| 01 | ಅಡಿಯೋಮೆಟ್ರಿ ಟೆಕ್ನಿಷಿಯನ್ | 01 | – | 01 |
| 02 | ಸ್ಪೀಚ್ ಥೆರಪಿಸ್ಟ್ | 03 | 01 | 02 |

ಕಾರಣ ಶ್ರೀಮತಿ ಅನುಷಾ. ಕೆ, ಅಡಿಯೋಮೆಟ್ರಿ ತಂತ್ರಜ್ಞರು ಹಾಗೂ ಶ್ರೀ ಕೆ. ಸಾಯಿ ಕಿರಣ್, ಸ್ಪೀಚ್ ಥೆರಫಿಸ್ಟ್ ಇವರಿಂದ ತೆರವಾಗಿರುವ ಅಡಿಯೋಮೆಟ್ರಿ ತಂತ್ರಜ್ಞರು ಹಾಗೂ ಸ್ಪೀಚ್ ಥೆರಫಿಸ್ಟ್ ಹುದ್ದೆಗಳನ್ನು ಸಂಚಿತ ವೇತನದ ಮೇಲೆ ತಾತ್ಕಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಸಂಸ್ಥೆಯಲ್ಲಿ ಖಾಲಿಯಿರುವ ಅಡಿಯೋಲಾಜಿಸ್ಟ್ ಮತ್ತು ಸ್ಪೀಚ್ ಥೆರಪಿಸ್ಟ್ ಹುದ್ದೆಗಳನ್ನು ಸಂಸ್ಥೆಯ ಹಿತದೃಷ್ಟಿಯಿಂದ ಸದರಿ ಹುದ್ದೆಗಳು ಖಾಯಂ ನೇಮಕಾತಿಯಾಗುವವರೆಗೆ ಸಂಚಿತ ವೇತನದ ಮೇಲೆ ತಾತ್ಕಲಿಕವಾಗಿ ಪ್ರತಿ ಮಾಹೆ ರೂ. 25,000/- ಗಳ ಸಂಚಿತ ವೇತನದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆಡಳಿತ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ –09 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಮರು ಟೆಂಡರ್ ಆಹ್ವಾನಿಸುವ ವೇಳೆಯಲ್ಲಿ ಸರ್ಕಾರದ ಅನುಮತಿ ತೆಗೆದುಕೊಳ್ಳುವುದರ ಬಗ್ಗೆ ಮಾರ್ಗದರ್ಶನ ನೀಡುವ ಬಗ್ಗೆ. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಿಮ್ಸ್ ಬೋಧಕ ಆಸ್ಪತ್ರೆ ಮತ್ತು ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಉಪಕರಣಗಳು, ಪೀಠೋಪಕರಣಗಳು, ಸಾಮಾಗ್ರಿಗಳು, ಮಾತ್ರೆ, ಔಷಧಗಳು, ರಸಾಯನಿಕಗಳು, ಸಿವಿಲ್ ಕಾಮಗಾರಿ ಗಳನ್ನು ನಿಯಮಾನುಸಾರ ಸರ್ಕಾರದ / ಖರೀದಿ / ಆರ್ಥಿಕ / ಆಡಳಿತ ಮಂಡಳಿಯ ಅನುಮೋದನೆ ಪಡೆದು ಇ – ಸಂಗ್ರಹಣಾ ಕೋಶದ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗುತ್ತದೆ. ಆದರೆ ಕೆಲವೊಂದು ಸಂಧರ್ಭದಲ್ಲಿ ಟೆಂಡರ್‌ನಲ್ಲಿ ಸಿಂಗಲ್ ಟೆಂಡರ್ / ಟೆಂಡರ್‌ನ ದಾಖಲೆಗಳ ಕೊರತೆ ಮತ್ತು ತಾಂತ್ರಿಕ ಕಾರಣಗಳಿಂದ ಟೆಂಡರ್‌ಗಳು ರದ್ದಾಗುತ್ತವೆ.

ಇಂತಹ ಸಮಯದಲ್ಲಿ ಪುನಃ ಮರು ಟೆಂಡರ್‌ನ್ನು ಆಹ್ವಾನಿಸಲು ಸರ್ಕಾರದ / ಖರೀದಿ / ಆರ್ಥಿಕ / ಆಡಳಿತ ಮಂಡಳಿಯ ಅನುಮೋದನೆ ಪಡೆದು ಟೆಂಡರ್ ಆಹ್ವಾನಿಸುವಲ್ಲಿ ಸಾಕಷ್ಟು ಸಮಯವನ್ನು ತೆಗೆದುಕೊಳ್ಳುತ್ತವೆ. ಇದರಿಂದಾಗಿ ವೈದ್ಯಕೀಯ ಕಾಲೇಜು / ಆಸ್ಪತ್ರೆಯ ದಿನ ನಿತ್ಯದ ಬೇಡಿಕೆಗಳನ್ನು ನಿಗದಿತ ಅವಧಿಯಲ್ಲಿ ಪೂರೈಸಲು ಸಾಧ್ಯವಾಗುದಿಲ್ಲ.

ಕಾರಣ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಮರು ಟೆಂಡರ್ ಆಹ್ವಾನಿಸುವ ವೇಳೆಯಲ್ಲಿ ಸರ್ಕಾರದ / ಖರೀದಿ / ಆರ್ಥಿಕ / ಆಡಳಿತ ಮಂಡಳಿಯ ಅನುಮೋದನೆ ಪಡೆದು ಮರು ಟೆಂಡರ್‌ನ್ನು ಆಹ್ವಾನಿಸಬೇಕೋ ಅಥವಾ ನೇರವಾಗಿ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಅಧಿಸೂಚನೆಯನ್ನು ಹೊರಡಿಸಿ ಅಗತ್ಯ ಕ್ರಮ ಕೈಗೊಳ್ಳಬೇಕೆಂಬುದರ ಬಗ್ಗೆ ಆಡಳಿತ ಮಂಡಳಿಯ ಸೂಕ್ತ ಮಾರ್ಗದರ್ಶನ ಕೋರಿ ಸಲ್ಲಿಸಿದೆ.

Director
RIMS, Raichur

ಸಭೆಯ ತೀರ್ಮಾನ :-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಿಮ್ಸ್ ಬೋಧಕ ಆಸ್ಪತ್ರೆ ಮತ್ತು ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಉಪಕರಣಗಳು, ಪೀಠೋಪಕರಣಗಳು, ಸಾಮಾಗ್ರಿಗಳು, ಮಾತ್ರೆ, ಔಷಧಗಳು, ರಸಾಯನಿಕಗಳು, ಸಿವಿಲ್ ಕಾಮಗಾರಿಗಳಿಗೆ ಕೆ.ಟಿ.ಪಿ.ಪಿ ಕಾಯ್ದೆಯಂತೆ ಟೆಂಡರ್ ಆಹ್ವಾನಿಸಲು ಸರ್ಕಾರದ / ಖರೀದಿ / ಆರ್ಥಿಕ / ಆಡಳಿತ ಮಂಡಳಿಯ ಅನುಮೋದನೆ ಪಡೆದಿದ್ದಲ್ಲಿ ಮತ್ತೊಮ್ಮೆ ಮರು ಟೆಂಡರ್ ಆಹ್ವಾನಿಸಲು ಅನುಮತಿಯ ಅವಶ್ಯಕತೆಯಿರುವುದಿಲ್ಲವೆಂದು ಆಡಳಿತ ಮಂಡಳಿಯು ನಿರ್ದೇಶನ ನೀಡಲಾಯಿತು.

| ವಿಷಯ ಸೂಚಿ ಸಂಖ್ಯೆ – 10 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಸ್ಥಾನಿಕರು / ಸಹಾಯಕ ಪ್ರಾಧ್ಯಾಪಕರು ಸಂಚಿತ ವೇತನ ಹೆಚ್ಚಿಸಲು ಅನುಮತಿ ನೀಡುವ ಕುರಿತು |
|---|---|

ಸರ್ಕಾರದ ಆದೇಶ ಸಂ. ಆಕುಕ 359 ಎಂಎಂಸಿ 2017 ಬೆಂಗಳೂರು ದಿನಾಂಕ : 25.09.2017 ರನ್ವಯ ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ಟ್ಯೂಟರ್ / ಜೂನಿಯರ್ ರೆಸಿಡೆಂಟ್ ಗಳಿಗೆ ತತ್‌ಕ್ಷಣದಿಂದ ಜಾರಿಗೆ ಬರುವಂತೆ ಕನಿಷ್ಠ ವೇತನ ಕಾಯ್ದೆಯನ್ವಯ ಪರಿಷ್ಕೃತಗೊಂಡಿರುವ ರೂ.40,000 ಗಳನ್ನು ಮಾಸಿಕ ಸಂಚಿತ ವೇತನವನ್ನಾಗಿ ನಿಗಧಿಪಡಿಸುವಂತೆ ಆದೇಶಿಸಿದ್ದು, ಪ್ರಸ್ತುತ ರಿಮ್ಸ್ ಸಂಸ್ಥೆಯಲ್ಲಿ ಒಟ್ಟು 89 ಬೋಧಕರು / ಕಿರಿಯ ಸ್ಥಾನಿಕರಿಗೆ ಈ ಆದೇಶವು ಅನ್ವಯವಾಗುತ್ತದೆ.

ರಿಮ್ಸ್ ಸಂಸ್ಥೆಯಲ್ಲಿ ಪ್ರಸ್ತುತ ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಸ್ಥಾನಿಕರು ಹಾಗೂ ಸಹಾಯಕ ಪ್ರಾಧ್ಯಾಪಕರುಗಳು ಸರ್ಕಾರದ ಆದೇಶ ಸಂ. ಆಕುಕ 359 ಎಂಎಂಸಿ 2017 ಬೆಂಗಳೂರು ದಿನಾಂಕ : 25.09.2017 ರನ್ವಯ ಬೋಧಕರು / ಕಿರಿಯ ಸ್ಥಾನಿಕರಿಗೆ ನಿಗಧಿಪಡಿಸಿರುವ ವೇತನವು ಪ್ರಸ್ತುತ ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಸ್ಥಾನಿಕರು ಹಾಗೂ ಸಹಾಯಕ ಪ್ರಾಧ್ಯಾಪಕರುಗಳಿಗೆ ಸಮನಾಂತರವಾಗಿರುವುದರಿಂದ ಹಿರಿಯ ಸ್ಥಾನಿಕರಿಗೆ ಮಾಸಿಕ ರೂ. 50,000 /- ಹಾಗೂ ಸಹಾಯಕ ಪ್ರಾಧ್ಯಾಪಕರುಗಳಿಗೆ ಮಾಸಿಕ ರೂ.60,000/- ಗಳನ್ನು ನಿಗಧಿಪಡಿಸಿ ಪಾವತಿಸುವಂತೆ ಮನವಿ ಮಾಡಿರುತ್ತಾರೆ.

| ಕ್ರ.ಸಂ. | ವೃಂದ | ಮಂಜೂರಾದ ಹುದ್ದೆಗಳ ಸಂಖ್ಯೆ |
|---|---|---|
| 1 | ಹಿರಿಯ ಸ್ಥಾನಿಕರು | 46 |
| 2 | ಸಹಾಯಕ ಪ್ರಾಧ್ಯಾಪಕರು | 43 |

ಕಾರಣ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಸ್ಥಾನಿಕರಿಗೆ ರೂ. 50,000/- ಹಾಗೂ ಸಹಾಯಕ ಪ್ರಾಧ್ಯಾಪಕರುಗಳಿಗೆ ರೂ. 60,000/- ಗಳನ್ನು ಪ್ರತಿ ಮಾಹೆಯಂತೆ ಸಂಚಿತ ವೇತನವನ್ನು ನಿಗಧಿಪಡಿಸಿ ಪಾವತಿಸುವ ಕುರಿತು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಂಚಿತ ವೇತನದಲ್ಲಿ ನೇಮಕಾತಿ ಹೊಂದಿ ಕಾರ್ಯನಿರ್ವಹಿಸುತ್ತಿರುವ ಪ್ರತಿ ಹಿರಿಯ ಸ್ಥಾನಿಕರಿಗೆ ಪ್ರತಿ ಮಾಹೆ ರೂ. 50,000/- ಗಳನ್ನು ಹಾಗೂ ಪ್ರತಿ ಸಹಾಯಕ ಪ್ರಾಧ್ಯಾಪಕರುಗಳಿಗೆ ಪ್ರತಿ ಮಾಹೆ ರೂ. 60,000/- ಗಳ ಸಂಚಿತ ವೇತನದಂತೆ ಹುದ್ದೆಗಳು ಖಾಯಂ ಆಗಿ ಭರ್ತಿಯಾಗುವವರೆಗೆ ನಿಗಧಿಪಡಿಸಿ ಪಾವತಿಸಲು ಆಡಳಿತ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

Director
RIMS Raichur

ಮುಂದುವರೆದು ರಿಮ್ಸ್ ಸಂಸ್ಥೆಯಲ್ಲಿ ಖಾಲಿಯಿರುವ ಹಿರಿಯ ಸ್ಥಾನಿಕರು ಮತ್ತು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ನೇರ ಸಂದರ್ಶನದ ಅಧಿಸೂಚನೆಯನ್ನು ಹೊರಡಿಸಿ, ಸದರಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಆಡಳಿತ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ –11 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸ್ಟೈಫೆಂಡ್ ವೇತನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ 36 ಶುಶ್ರೂಷಕರನ್ನು ಕರ್ತವ್ಯದಿಂದ ಬಿಡುಗಡೆ ಮಾಡುವ ಬಗ್ಗೆ. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಒಟ್ಟು 255 ಶುಶ್ರೂಷಕರ ಹುದ್ದೆಗಳು ಮಂಜೂರಾಗಿದ್ದು, ಸದ್ಯ 188 ಶುಶ್ರೂಷಕರು ಖಾಯಂ ನೇಮಕಾತಿ ಹೊಂದಿ ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಇನ್ನು 40 ಜನ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ನಿರೀಕ್ಷಣ ಪಟ್ಟಿಯಲ್ಲಿ 10% ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸುವ ಹಂತದಲ್ಲಿ ಇರುತ್ತದೆ.

ಖಾಯಂ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ಆಸ್ಪತ್ರೆಯಲ್ಲಿನ ರೋಗಿಗಳ ಉಪಚಾರಕ್ಕಾಗಿ ಸ್ಟೈಫಂಡರಿ ವೇತನದ ಆಧಾರದಲ್ಲಿ 100 ಶುಶ್ರೂಷಕರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಲಾಗಿದ್ದು, ಅದರಲ್ಲಿ 64 ಶುಶ್ರೂಷಕರು ವ್ಯಯಕ್ತಿಕ ಕಾರಣಗಳಿಂದ ರಾಜೀನಾಮೆ / ಇತರ ಸಂಸ್ಥೆಗಳಲ್ಲಿ ಖಾಯಂ ನೇಮಕಾತಿ ಹೊಂದಿರುತ್ತಾರೆ. ಪ್ರಸ್ತುತ 36 ಸ್ಟೈಫಂಡರಿ ಶುಶ್ರೂಷಕರು ಕಾರ್ಯನಿರ್ವಹಿಸುತ್ತಿದ್ದಾರೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಶುಶ್ರೂಷಕರು ನೇಮಕಾತಿಯಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುತ್ತಿದ್ದರಿಂದ ಸ್ಟೈಫೆಂಡ್ ವೇತನದ ಮೇಲೆ ಕಾರ್ಯನಿರ್ವಹಿಸುತ್ತಿರುವ 36 ಶುಶ್ರೂಷಕರ ಸೇವೆಯನ್ನು ಮುಂದುವರೆಸುವುದನ್ನು ತಡೆಹಿಡಿಯಲಾಗಿತ್ತು. ಸದರಿಯವರ ಸೇವೆಯನ್ನು ತಡೆಹಿಡಿದಿದ್ದರಿಂದ 36 ಶುಶ್ರೂಷಕರು ತಮ್ಮ ಸೇವೆಯನ್ನು ಮುಂದುವರೆಸುವಂತೆ ಕೋರಿ ದಿನಾಂಕ 15.07.2017 ರಿಂದ 25.07.2017ರವರೆಗೆ ಧರಣಿ ಸತ್ಯಾಗ್ರಹವನ್ನು ನಡೆಸಿರುತ್ತಾರೆ.

| ಮಂಜೂರಾದ ಹುದ್ದೆ | ಖಾಯಂ ಕಾರ್ಯನಿರ್ವಹಿಸುತ್ತಿರುವ ಶುಶ್ರೂಷಕರು | ನಿರೀಕ್ಷಣಾ ಪಟ್ಟಿ (2ನೇ ಆಯ್ಕೆ ಪಟ್ಟಿ) | ಸ್ಟೈಫಂಡರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶುಶ್ರೂಷಕರು | ಒಟ್ಟು |
|---|---|---|---|---|
| 255 | 188 | 40 (ಹೆಚ್ಚುವರಿ 10%) | 36 | 258 |

ಕಾರಣ ಸ್ಟೈಫಂಡರಿ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ 36 ಶುಶ್ರೂಷಕರನ್ನು ಕರ್ತವ್ಯದಿಂದ ಬಿಡುಗಡೆ ಮಾಡಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸ್ಟೈಫೆಂಡರಿ ವೇತನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ 36 ಶುಶ್ರೂಷಕರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ, ಸ್ಟೈಪೆಂಡ್ ವೇತನ ರೂ. 8,000/– ಗಳ ಬದಲಾಗಿ ರೂ. 10,000/– ಗಳ ಸ್ಟೈಫೆಂಡ್ ವೇತನವನ್ನು ನಿಗದಿಪಡಿಸಿಕೊಂಡು ಹೊಸ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಿ, ಒಟ್ಟು ಮಂಜೂರಾದ 255 ಶುಶ್ರೂಷಕರ ಹುದ್ದೆಗಳ ಪೈಕಿ ಸಂಸ್ಥೆಯಲ್ಲಿ ಹಾಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ನೇಮಕಾತಿ ಹೊಂದಿದ ಮತ್ತು ಈಗಾಗಲೇ ಖಾಯಂ ಆಗಿ ನೇಮಕಾತಿಗೊಂಡು ಕಾರ್ಯನಿರ್ವಹಿಸುತ್ತಿರುವ ಶುಶ್ರೂಷಕರನ್ನು ಹೊರತುಪಡಿಸಿ, ಖಾಲಿ ಉಳಿದ ಶುಶ್ರೂಷಕರ ಹುದ್ದೆಗಳನ್ನು ಅಧಿಸೂಚನೆ ಹೊರಡಿಸಿ ನೇಮಕಾತಿ ಮಾಡಿಕೊಳ್ಳುವಂತೆ ಆಡಳಿತ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

Director
RIMS Raichur

| ವಿಷಯ ಸೂಚಿ ಸಂಖ್ಯೆ –12 | ರಿಮ್ಸ್ ಆವರಣದಲ್ಲಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವಸತಿ ಸಮುಚ್ಚಯಗಳಿಗೆ ಮೆಶ್‌ನ್ನು ಅಳವಡಿಸುವ ಬಗ್ಗೆ. |
|---|---|

ರಿಮ್ಸ್ ಆವರಣದಲ್ಲಿರುವ ಬೋಧಕ ಸಿಬ್ಬಂದಿ ವಸತಿ ಸಮುಚ್ಚಯ, ಗ್ರೂಪ್ "ಸಿ" ಮತ್ತು ಗ್ರೂಪ್ "ಡಿ" ವಸತಿ ಸಮುಚ್ಚಯಗಳಲ್ಲಿ ವಾಸವಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ರಿಮ್ಸ್ ಕಾರ್ಯಾಲಯಕ್ಕೆ ಮನವಿಯನ್ನು ಸಲ್ಲಿಸಿ, ಸಂಸ್ಥೆಯ ಹಿಂಭಾಗದಲ್ಲಿ ಎಲ್.ಬಿ.ಎಸ್ ನಗರದಿಂದ ಹರಿದು ಬರುವ ಚರಂಡಿ ನೀರು ಕಾಂಪೌಂಡ್ ಪಕ್ಕದಲ್ಲಿ ಹಾದು ಹೋಗುವುದರಿಂದ, ವಿಪರೀತ ಸೊಳ್ಳೆಗಳ ಹಾವಳಿ ಜಾಸ್ತಿಯಾಗಿರುತ್ತದೆಯಂದು, ಪ್ರಸ್ತುತ ಮಳೆಗಾಲವಿರುವುದರಿಂದ ಇದರ ಸಮಸ್ಯ ಇನ್ನಷ್ಟು ಉಲ್ಬಣಗೊಂಡಿರುತ್ತದೆಯಂದು, ಅಲ್ಲದೇ ವಸತಿ ಗೃಹಗಳ ಬಾಲ್ಕನಿಗಳಲ್ಲಿ ಮಂಗಗಳ ಹಾವಳಿ ಸಹ ಜಾಸ್ತಿಯಾಗಿದ್ದು, ಮಂಗಗಳು ಏಕಾಏಕಿ ಮನೆಗಳಿಗೆ ನುಗ್ಗಿ ಮನೆಯಲ್ಲಿರುವ ಸಾಮಾನುಗಳನ್ನು ಎಲ್ಲೆಂದರಲ್ಲಿ ಹರಡುತ್ತವೆ. ಮನೆಗೆ ನುಗ್ಗಿದ ಮಂಗಗಳು ಮನೆಯ ಸದಸ್ಯರಿಗೆ ಕಚ್ಚಲು ಬರುತ್ತವೆ. ಈ ಹಿನ್ನಲೆಯಲ್ಲಿ ಆವರಣದಲ್ಲಿ ವಾಸವಿರುವ ಬೋದಕ ಮತ್ತು ಬೋಧಕೇತರ ಸಿಬ್ಬಂದಿಗಳು ಆವರಣದಲ್ಲಿರುವ 48 ಬೋಧಕ ಮತ್ತು 64 ಬೋದಕೇತರ ಸಿಬ್ಬಂದಿ ವಸತಿ ಸಮುಚ್ಚಯಗಳಿಗೆ ಮೆಶ್ ನ್ನು ಅಳವಡಿಸಿಕೊಡುವಂತೆ ಕೋರಿರುತ್ತಾರೆ.

ಸದರಿ ವಸತಿ ಸಮುಚ್ಚಯಗಳಿಗೆ ಮೆಶ್‌ನ್ನು ಅಳವಡಿಸುವ ಸಂಬಂಧ ಮೆ॥ ಕ್ಯಾಷುಟೆಕ್, ರಾಯಚೂರು ಇವರಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಕೋರಲಾಗಿತ್ತು. ಸದರಿಯವರು ಬೋಧಕ ಸಿಬ್ಬಂದಿ ವಸತಿ ಸಮುಚ್ಚಯಕ್ಕೆ ಮೆಶ್‌ನ್ನು ಅಳವಡಿಸಲು ರೂ. 20,16,000/– ಗಳ ಅಂದಾಜು ಪಟ್ಟಿಯನ್ನು ಮತ್ತು ಗ್ರೂಪ್ ಸಿ ಮತ್ತು ಗ್ರೂಪ್ ಡಿ ವಸತಿ ಸಮುಚ್ಚಯಗಳಿಗೆ ಮೆಶ್‌ನ್ನು ಅಳವಡಿಸಲು ರೂ. 20,16,000/– ಗಳ ಅಂದಾಜು ಪಟ್ಟಿಯನ್ನು ಸಲ್ಲಿಸಿರುತ್ತಾರೆ.

ಆವರಣದಲ್ಲಿ ವಾಸವಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಂದ ಸರ್ಕಾರದ ನಿಯಮಾವಳಿಯಂತೆ, ಶೇ 10% ಮನೆ ಬಾಡಿಗೆಯನ್ನು ಸಿಬ್ಬಂದಿಯವರ ವೇತನದಿಂದ ಕಟಾಯಿಸಲಾಗುತ್ತಿದ್ದು, ಕಟಾಯಿಸಲಾದ ಮನೆ ಬಾಡಿಗೆಯನ್ನು ಸಂಸ್ಥೆಯ ನಿರ್ವಹಣಾ ಖಾತೆಗೆ ಜಮಾ ಮಾಡಲಾಗುತ್ತಿದೆ. ಪ್ರಸ್ತುತ ನಿರ್ವಹಣಾ ಖಾತೆಯಲ್ಲಿ ರೂ. 4,40,37,456/– ಗಳ ಅನುದಾನವು ಸಂಗ್ರಹಗೊಂಡಿರುತ್ತದೆ.

ಮೆ॥ ಕ್ಯಾಷುಟೆಕ್ ಸಂಸ್ಥೆಯು ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರು ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರಿ ಅಧಿಸೂಚನೆ ಸಂಖ್ಯೆ. ವಇ / 156 / ಹೆಚ್‌ಎಂ / 2009 ದಿನಾಂಕ 29.12.2009 ರಂತೆ ಕಾಮಗಾರಿಗಳನ್ನು ಸದರಿಯವರ ಮುಖಾಂತರ ನೇರವಾಗಿ ಕೈಗೊಳ್ಳಲು ಪಾರದರ್ಶಕತೆ ಕಾಯ್ದೆಯಿಂದ (4ಜಿ) ವಿನಾಯಿತಿ ನೀಡಲಾಗಿದ್ದು, ಪ್ರಸ್ತುತ ಆವರಣದಲ್ಲಿನ ವಿದ್ಯಾರ್ಥಿಗಳ ವಸತಿ ನಿಲಯಗಳಿಗೆ ಮೆಶ್‌ನ್ನು ಉತ್ತಮವಾಗಿ ಅಳವಡಿಸುತ್ತಿರುವುದರಿಂದ ಸದರಿಯವರ ಮುಖಾಂತರವೇ ಮೆಶ್‌ನ್ನು ಅಳವಡಿಸಬಹುದಾಗಿರುತ್ತದೆ.

ಕಾರಣ ರಿಮ್ಸ್ ಆವರಣದಲ್ಲಿರುವ 48 ಬೋಧಕ ಸಿಬ್ಬಂದಿ ವಸತಿ ಸಮುಚ್ಚಯ, 32 ಗ್ರೂಪ್ "ಸಿ" ಮತ್ತು 32 ಗ್ರೂಪ್ "ಡಿ" ವಸತಿ ನಿಲಯಗಳಿಗೆ ಮೆಶ್‌ನ್ನು ಮೆ॥ ಕ್ಯಾಷುಟೆಕ್ ಮುಖಾಂತರ ಅಳವಡಿಸಲು ಹಾಗೂ ಈ ವೆಚ್ಚವನ್ನು ಸಂಸ್ಥೆಯ ನಿರ್ವಹಣಾ ಖಾತೆಯಲ್ಲಿ ಸಂಗ್ರಹವಾಗಿರುವ ರೂ. 4,40,37,456/– ಗಳ ಅನುದಾನದಿಂದ ಭರಿಸಲು ಅನುಮತಿ ನೀಡುವಂತೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ರಿಮ್ಸ್ ಆವರಣದಲ್ಲಿರುವ 48 ಬೋಧಕ ಸಿಬ್ಬಂದಿ ವಸತಿ ಗೃಹಗಳು ಹಾಗು 32 ಗ್ರೂಪ್ ಸಿ ಮತ್ತು 32 ಗ್ರೂಪ್ ಡಿ ವಸತಿ ಸಮುಚ್ಚಯಗಳಿಗೆ ಮೆಶ್‌ನ್ನು ಅಳವಡಿಸಲು ಮೆ॥ ಕ್ಯಾಷುಟೆಕ್ ಇವರು ಸಲ್ಲಿಸಿರುವ ರೂ. 20,16,000/– ಗಳು (ಬೋಧಕ ಸಿಬ್ಬಂದಿ ವಸತಿ ಗೃಹಗಳು) ಮತ್ತು ರೂ. 20,16,000/– ಗಳ

Director
RIMS, Raichur

(ಗ್ರೂಪ್ ಸಿ ಮತ್ತು ಗ್ರೂಪ್ ಡಿ ವಸತಿ ಗೃಹಗಳು) ಅಂದಾಜು ಪಟ್ಟಿಯನ್ನು ಪರಿಶೀಲಿಸಿ, ಮೆ॥ ಕ್ಯಾಪಟೆಕ್ ಇವರ ಮುಖಾಂತರ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ನೀಡಲಾಯಿತು. ಹಾಗೂ ಈ ವೆಚ್ಚವನ್ನು ಸಂಸ್ಥೆಯ ನಿರ್ವಹಣಾ ಖಾತೆಯಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಭರಿಸಲು ಆಡಳಿತ ಮಂಡಳಿಯ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ –13 | ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು |

ಅಧ್ಯಕ್ಷರ ಅಪ್ಪಣೇ ಮೇರೆಗಿನ ವಿಷಯದಲ್ಲಿ ಯಾವುದೇ ವಿಷಯಗಳು ಚರ್ಚೆಯಾಗದೇ ಆಡಳಿತ ಮಂಡಳಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯವಾಯಿತು.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ವಿ.ಮಂಜುಲ) ಭಾ.ಆ.ಸೇ
ಸರ್ಕಾರದ ಅಪರ ಮುಖ್ಯ
ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು